

# ಹಲ್ಲುಗಳಿಗೆ ಅತ್ಯಾಧುನಿಕ ರೂಟ್ ಕೆನಾಲ್ ಚಿಕಿತ್ಸೆ

**ಹಲ್ಲುಗಳಿಗೆ ನೀಡುವ ರೂಟ್ ಕೆನಾಲ್ ಚಿಕಿತ್ಸೆಗೆ ಇತ್ತೀಚೆಗೆ ಹೈಟೆಕ್ ಸಲಕರಣೆಗಳು ಬಂದಿವೆ. ಈ ಚಿಕಿತ್ಸೆ ಮೂಲಕ ಹುಳುಕಾದ ಹಲ್ಲನ್ನು ಪೂರ್ವಸ್ಥಿತಿಗೆ ತರಲಾಗುವುದು. ಆಧುನಿಕ ರೂಟ್ ಕೆನಾಲ್ ಚಿಕಿತ್ಸೆಯನ್ನು ವೈಯಕ್ತಿಕ ಅನುಕೂಲತೆ ಮತ್ತು ಹಲ್ಲಿನ ಸ್ಥಿತಿಗತಿಯ ಮೇಲೆ ಒಂದೆರಡು ಸಿಟ್ಟಿಂಗ್‌ನಲ್ಲಿಯೇ ಮುಗಿಸಬಹುದು.**

■ **ಡಾ. ಅನಿಕೇತ್ ಶರ್ಮಾ**

ಹೇಮಾಗೆ ಹಲ್ಲಿನ ಸಮಸ್ಯೆ. ಏನೇ ಆಹಾರ ತಿಂದರೂ ಕೊನೆಯ ಹಲ್ಲಿನಲ್ಲಾದ ತೂತಿನಲ್ಲಿ ಹೋಗಿ ಆಹಾರ ಕಣ ಕುಳಿತು ವಿಪರೀತ ನೋವು. ದಂತ ವೈದ್ಯರ ಬಳಿ ಹೋಗಿ ಹಲ್ಲು ಕೀಳಿಸುವುದೊಂದೇ ದಾರಿ ಎಂದು ವೈದ್ಯರ ಬಳಿ ಹೋಗಿದ್ದಾಯಿತು. ಹಲ್ಲಿನ ಎಕ್ಸ್‌ರೇ ತೆಗೆಸಿದ ವೈದ್ಯರು 'ಇದು ದಂತಕುಳಿ ಸಮಸ್ಯೆ. ಇದನ್ನು ರೂಟ್ ಕೆನಾಲ್ ಚಿಕಿತ್ಸೆ ಮೂಲಕ ಉಳಿಸಬಹುದು' ಎಂದು ಸಲಹೆ ನೀಡಿದರು. ವೈದ್ಯರ ಸಲಹೆಯಂತೆ ರೂಟ್ ಕೆನಾಲ್ ಚಿಕಿತ್ಸೆ ಮಾಡಿಸಿಕೊಂಡ ಹೇಮಾಳ ಹಲ್ಲಿನ ಸಮಸ್ಯೆ ಬಹುಬೇಗ ಬಗೆಹರಿಯಿತು.

ಹಿಂದೆಲ್ಲಾ ಹಲ್ಲುಗಳಲ್ಲಿ ರಂಧ್ರ ಅಥವಾ ಕುಳಿಯಾದರೆ ಮತ್ತು ಹಲ್ಲುಗಳು ಬಣ್ಣಗೆಟ್ಟು ಹುಳಿತು ಹೋಗಲು ಆರಂಭವಾದರೆ, ದಂತ ವೈದ್ಯರು ನಿಮ್ಮ ಹಲ್ಲುಗಳನ್ನು ಕಿತ್ತು ತೆಗೆಯುತ್ತಿದ್ದರು. ಆದರೆ ಇಂದು ವೈದ್ಯರು ಹಲ್ಲನ್ನು ಕಿತ್ತು ತೆಗೆಯದೆ ಅದನ್ನು ಉಳಿಸಿ, ನೈಸರ್ಗಿಕವಾಗಿ ಬಂದ ಹಲ್ಲನ್ನು ನೀವು ಬಹುಕಾಲ ಉಪಯೋಗಿಸುವಂತೆ ಮಾಡುತ್ತಾರೆ. ಇದೇ ರೂಟ್ ಕೆನಾಲ್ ಚಿಕಿತ್ಸೆ. ಇದನ್ನು 'ಹಲ್ಲು ಉಳಿಸುವ ಚಿಕಿತ್ಸೆ' ಎಂದೂ ಕರೆಯುತ್ತಾರೆ.

ನಮ್ಮ ಹಲ್ಲುಗಳು ಬಹುಕಾಲ ಬಾಳಬೇಕು, ಬದುಕಿರುವವರೆಗೆ ಯಾವುದೇ ಅಡಚಣೆ ಇಲ್ಲದೆ ಸಂತೃಪ್ತಿಯಿಂದ ಜಗಿದು ತಿಂದು ಅನುಭವಿಸುವಂತಿರಬೇಕು. ಅಥವಾ ಹಲ್ಲಿನಿಂದಾಗಿ ಮುಖದ ಸೌಂದರ್ಯಕ್ಕೆ ಚ್ಯುತಿಯಾಗಬಾರದು ಎನ್ನುವುದು ಪ್ರತಿಯೊಬ್ಬರ ಆಶೆ. ಆದರೂ ತಿಳಿದೋ– ತಿಳಿದೆಯೋ, ಹಲ್ಲುಗಳಿಗೆ ಹಾನಿಯಾಗುತ್ತಲೇ ಇರುತ್ತದೆ. ಹಲವು ಬಾರಿ ಹಲ್ಲಿನಲ್ಲಿ ಆಗುವ ರಂಧ್ರ–ಕುಳಿ ಅಥವಾ ಹಲ್ಲಿಗಾಗುವ ಪೆಟ್ಟಿನಿಂದಾಗಿ ಹಲ್ಲುಗಳಲ್ಲಿ ಸೀಳು (crack) ಬರುತ್ತದೆ. ಇದರಿಂದ ಹಲ್ಲಿನ ಒಳಭಾಗದಲ್ಲಿ ಹಲ್ಲಿಗೆ ಸೋಂಕು ತಗುಲಿ, ಬಾವು ಆಗಿ (inflammation) ರಕ್ತನಾಳ ಮತ್ತು ನರಗಳ ಜಾಲವಾದ ಹಲ್ಲಿನ ತಿರುಳನ್ನು (pulp)ನ್ನು ನಾಶಪಡಿಸುತ್ತವೆ. ಇದನ್ನು ಹಾಗೆಯೇ ಬಿಟ್ಟರೆ ಈ ಸೋಂಕು ಹಲ್ಲಿನ ಸುತ್ತಲಿನ ಎಲುವುಗಳಿಗೆ ವ್ಯಾಪಿಸಿ ಆ ಭಾಗದ ದವಡೆ ಉಬ್ಬುವಂತೆ (swelling) ಅಥವಾ ಬಾವು (abscess) ಆಗುವಂತೆ ಮಾಡುತ್ತದೆ. ಇದು ಸಹಿಸಲಾರದ ನೋವನ್ನು ಕೊಡುತ್ತಿದ್ದು, ದಂತ ವೈದ್ಯರು ಹಲ್ಲನ್ನು ಕಿತ್ತು ತೆಗೆಯದೆ, ಎಂಡೋಡೊಂಟಿಕ್ ಅಥವಾ ರೂಟ್ ಕೆನಾಲ್ ಚಿಕಿತ್ಸೆ ಮೂಲಕ ಇದನ್ನು ವಾಸಿಗೊಳಿಸುತ್ತಾರೆ.

### ಚಿಕಿತ್ಸೆ ಹೇಗೆ?

ಈ ಚಿಕಿತ್ಸೆಯನ್ನು ಹಲ್ಲಿನ ಒಳಭಾಗಕ್ಕೆ ಮಾಡಲಾಗುತ್ತಿದ್ದು, ಹಲ್ಲಿನಲ್ಲಿ ಬಾವು ಅಥವಾ ಸೋಂಕು ತಗುಲಿದ ತಿರುಳನ್ನು ತೆಗೆದು ಹಲ್ಲಿನ ಒಳಭಾಗವನ್ನು ಸ್ವಚ್ಛಗೊಳಿಸಿ, ಸೋಂಕು ನಿವಾರಕವನ್ನು (Disinfection) ಹಾಕಲಾಗುವುದು. ನಂತರ ರಬ್ಬರ್ ರೀತಿಯ ಗಟ್ಟಾ ಪರ್ಚಾ (gutta percha) ಎನ್ನುವ ಪದಾರ್ಥದಿಂದ ಮುಚ್ಚಿ ಹಲ್ಲನ್ನು ಬಂದ್ (seal) ಮಾಡುತ್ತಿದ್ದು, ರಕ್ಷಣೆಗಾಗಿ ಕ್ರೌನ್ (cap) ನಿಂದ ಮುಚ್ಚಿ ಹಲ್ಲನ್ನು ಪೂರ್ವಸ್ಥಿತಿಗೆ ತರಲಾಗುವುದು. ಸೋಂಕು ತಾಗದಂತೆ ಆ್ಯಂಟಿಬಯೋಟಿಕ್ (antibiotic) ಕೊಡಲಾಗುವುದು.

ಇತ್ತೀಚೆಗೆ ಹೈಟೆಕ್ ಸಲಕರಣೆಗಳ ಮೂಲಕ ದಂತ ವೈದ್ಯರು ರೂಟ್ ಕೆನಾಲ್ ಅನ್ನು ಸರಿಯಾಗಿ ತುಂಬಲಾಗಿದೆಯೇ ಎಂಬುದನ್ನೂ ನೋಡುತ್ತಾರೆ. ಈ ರೀತಿ ಹಲ್ಲನ್ನು ಪೂರ್ವಸ್ಥಿತಿಗೆ ತಂದ ಮೇಲೆ, ಅದು ಬೇರೆ ಹಲ್ಲಿನಂತೆ ಕೆಲಸ ಮಾಡುವುದು. ಆಧುನಿಕ ರೂಟ್ ಕೆನಾಲ್ ಚಿಕಿತ್ಸೆ, ಸಾಮಾನ್ಯವಾಗಿ ಹಲ್ಲು ತುಂಬುವ ಚಿಕಿತ್ಸೆಯಂತೆ ಇದ್ದು, ವೈಯಕ್ತಿಕ ಅನುಕೂಲತೆ ಮತ್ತು ಹಲ್ಲಿನ ಸ್ಥಿತಿಗತಿಯ ಮೇಲೆ ಈ ಚಿಕಿತ್ಸೆಯನ್ನು ಒಂದೆರಡು ಸಿಟ್ಟಿಂಗ್ ನಲ್ಲಿ ಮುಗಿಸಬಹುದು.





### ಚಿಕಿತ್ಸೆಯಿಂದಾಗುವ ಪ್ರಯೋಜನ

ಈ ಚಿಕಿತ್ಸೆ ಮಾಡಿಸಿಕೊಂಡರೆ, ನಿಮ್ಮ ಸ್ವಾಭಾವಿಕ ನಗೆಯನ್ನು ಉಳಿಸಿಕೊಳ್ಳಬಹುದು. ನಿಮಗಿಷ್ಟವಾದ ಆಹಾರವನ್ನು ತಿನ್ನಬಹುದು. ನಿಮ್ಮ ಉಳಿದ ಹಲ್ಲುಗಳನ್ನು ಅಧಿಕ wear ಮತ್ತು strain ನಿಂದ ರಕ್ಷಿಸಬಹುದು. ಸ್ವಾಭಾವಿಕವಾಗಿ ಜಗಿಯುವುದು ಮತ್ತು ಕಚ್ಚುವುದನ್ನು ಮಾಡಬಹುದು. ಹಲ್ಲಿನ ಸಂವೇದನೆ (sensation) ನಿಂದ ಮುಕ್ತಿ ಪಡೆಯಬಹುದು.

ದಂತ ವೈದ್ಯರು ಈ ಚಿಕಿತ್ಸೆ ಮಾಡುವ ಮೊದಲು, ಹಲ್ಲು ಮತ್ತು ಹಲ್ಲಿನ ಇತಿಹಾಸವನ್ನು (ಮೊದಲು ಪಡೆದು ಕೊಂಡ ಚಿಕಿತ್ಸೆ) ಹಾಗೂ ಇತರ ಸಾಮಾನ್ಯ ಆರೋಗ್ಯದ ವಿವರವನ್ನು ಕೂಲಂಕಷವಾಗಿ ಪರೀಕ್ಷಿಸುವರು. ಆ ಭಾಗದ ರೇಡಿಯೋಗ್ರಾಫಿಕ್ ಚಿತ್ರ (ಎಕ್ಸ್‌ರೇ) ವನ್ನು ತೆಗೆದುಕೊಳ್ಳುವರು. ಸದ್ಯದಲ್ಲಿ ತೆಗೆದುಕೊಳ್ಳುವ ಇತರ ಔಷಧಗಳ ಬಗೆಗೂ ವಿವರಣೆ ಪಡೆಯುವರು. ಈ ಚಿಕಿತ್ಸೆ ಮಾಡುವ ಮೊದಲು ಔಷಧಗಳಿಂದ ವಾಸಿ ಮಾಡಲು ಸಾಧ್ಯವೇ ಎನ್ನುವುದನ್ನು ಪರೀಕ್ಷಿಸುವರು.

ರೂಟ್ ಕೆನಾಲ್ ಚಿಕಿತ್ಸೆ ಒಂದು ಸಣ್ಣ ಶಸ್ತ್ರಚಿಕಿತ್ಸೆಯಾಗಿದ್ದು, ಲೋಕಲ್ ಅನಸ್ತೇಷಿಯಾವನ್ನು ಸಂಬಂಧಪಟ್ಟ ಹಲ್ಲುಗಳಿಗೆ ಮತ್ತು ಪಕ್ಕದ ಮಾಂಸ ಖಂಡಕ್ಕೆ ಕೊಡಲಾಗುವುದು. ಅವುಗಳು ಪೂರ್ಣ ನಿಶ್ಚೇತಿತವಾದ ಮೇಲೆಯೇ ಶಸ್ತ್ರ ಚಿಕಿತ್ಸೆಯನ್ನು ಮಾಡಲಾಗುವುದು. ಶಸ್ತ್ರಚಿಕಿತ್ಸೆ ಸಣ್ಣದಾದರೂ ಪ್ರಕ್ರಿಯೆ ಮುಗಿಯಲು ತಾಸುಗಳೇ ಬೇಕಾಗುತ್ತದೆ. ರೂಟ್ ಕೆನಾಲ್‌ಗಳು ತುಂಬಾ ಸಣ್ಣದಿರುವುದರಿಂದ, ಶಸ್ತ್ರಚಿಕಿತ್ಸೆಯನ್ನು ಜಾಗರೂಕತೆಯಯಿಂದ ಆಧುನಿಕ ಸಲಕರಣೆಗಳಿಂದ ಮಾಡಬೇಕಾಗುತ್ತದೆ.

ಸಾಮಾನ್ಯವಾಗಿ ಒಂದು ಶಸ್ತ್ರಚಿಕಿತ್ಸೆ ಫಲಕಾರಿಯಾಗಬೇಕಾದರೆ ಅದು ರೋಗಿಯು ವೈದ್ಯರಿಗೆ ತನ್ನ ಸಮಸ್ಯೆಯ ಬಗೆಗೆ ಕೊಡುವ ವಿವರಣೆ ಮತ್ತು ರೋಗಿಯು ವೈದ್ಯರ ಆದೇಶವನ್ನು ಪಾಲಿಸುವುದರ ಮೇಲೆ ಅವಲಂಬಿಸಿ ಕೊಂಡಿರುತ್ತದೆ. ಈ ಚಿಕಿತ್ಸೆ ಮುಗಿದು ಒಂದೆರಡು ದಿನ, ಮತ್ತು ಕೆಲವು ಸಮಯ ಒಂ ದು ವಾರ ಹಲ್ಲುಗಳನ್ನು ಉಪಯೋಗಿಸುವಾಗ ಕಾಳಜಿ ವಹಿಸಬೇಕು. ಮುಖ್ಯವಾಗಿ ಗಟ್ಟಿಯಾದ ಪದಾರ್ಥ ಮತ್ತು ಮಾಂಸಾಹಾರ ವನ್ನು ತಿನ್ನುವಾಗ ಹೆಚ್ಚಿನ ನಿಗಾ ಅಗತ್ಯ.

ಈ ಚಿಕಿತ್ಸೆಗೆ ಸುಮಾರು ರೂಪಾಯಿ 3000– 12000 (cap/crown ವೆಚ್ಚ ಬಿಟ್ಟು) ಖರ್ಚಾಗುತ್ತಿದ್ದು, ಇದು ಹಲ್ಲಿನ ಸ್ಥಿತಿ–ಗತಿ, ಸಂಬಂಧಪಟ್ಟ ಕ್ಲಿನಿಕ್, ಪ್ರದೇಶ, ಮತ್ತು ಬಳಸುವ ಸಲಕರಣೆಗಳ ಮೇಲೆ ಅವಲಂಬಿಸಿ ರುತ್ತದೆ. ಇದನ್ನು ಸಾಮಾನ್ಯವಾಗಿ ಎಲ್ಲಾ ದಂತ ವೈದ್ಯ ಆಸ್ಪತ್ರೆಗಳಲ್ಲಿ ಮಾಡಿದರೂ, ಎಂಡೋಡೆಂಟಿಸ್ಟರಿಯಲ್ಲಿ ಪ್ರಾವೀಣ್ಯತೆ ಪಡೆದ ಎಂಡೋಡೆಂಟಿಸ್ಟ್ ಮಾಡುವುದೇ ಹೆಚ್ಚು.

(ವೈದ್ಯರ ಮೊಬೈಲ್: 9886303593)

